www.ecourtsindia.com



**ಸಾಕ್ಷಿಯನ್ನು ದಿ.23.04.2025 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾರ್ಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

ಮೂರು ಕೋಣೆಯ ಮನೆ ಮಾರಾಟಕ್ಕೆ ಇದೆ ಎಂದು ತಿಳಿಸಿದ ಬೋರ್ಡ್ ನಲ್ಲಿ ದೂರವಾಣಿ ಸಂಖ್ಯೆ ಇತ್ತು, ಅದಕ್ಕೆ ಕರೆ ಮಾಡಿದಾಗ ಆರೋಪಿ ಪರಿಚಯವಾಗಿರುತ್ತಾರೆ. ಪುನೀತ್ ಎನ್‌ಕ್ಲೇವ್ ನಲ್ಲಿರುವ 3 ಕೋಣೆಯ ಮನೆಯನ್ನು ಆರೋಪಿ ತೋರಿಸಿರುತ್ತಾರೆ. ಆರೋಪಿಯ ಬಳಿ ಸದರಿ ಮಾರಾಟಕ್ಕಿದ್ದ ಪ್ಲಾಟ್ ನ ದಾಖಲೆಗಳನ್ನು ಕೇಳಿದ್ದೆ, ಆರೋಪಿ ನೀಡಿರಲಿಲ್ಲ. ದಿ.26.03.2022 ರಂದು ಆರೋಪಿ ತಿಳಿಸಿದ ಮೇರೆಗೆ ರೂ.2 ಲಕ್ಷಗಳನ್ನು ಕಾಗದಪತ್ರಗಳನ್ನು ಪಡೆಯುವ ಸಲುವಾಗಿ ಮುಂಗಡ ಹಣವನ್ನು ನೀಡಿರುತ್ತೇನೆ. ಸದರಿ ರೂ.2 ಲಕ್ಷಗಳನ್ನು ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ಹೀಗೆ ಹಣವನ್ನು ವರ್ಗಾವಣೆ ಮಾಡಿದ್ದರೂ ಸಹ ಆರೋಪಿ ಕಾಗದಪತ್ರಗಳನ್ನು ನನಗೆ ನೀಡಿರಲಿಲ್ಲ.

2. ಆರೋಪಿ ಕಾಗದ ಪತ್ರಗಳನ್ನು ನೀಡದಿದ್ದರ ಬಾಬ್ತು ನಾನು ಯಾವುದೇ ತಿಳುವಳಿಕಾ ಪತ್ರವನ್ನು ನೀಡಿಲ್ಲ. ಎಲ್ಲಾ ಕಾಗದಪತ್ರಗಳು ಲೆಕ್ಕಾಧಿಕಾರಿ ಬಳಿ ಇದೆ, ರೂ.18 ಲಕ್ಷಗಳನ್ನು ನೀಡಿ 5 ದಿನದ ಒಳಗಾಗಿ ಕ್ರಯಪತ್ರವನ್ನು ಬರೆಸಿಕೊಡುತ್ತೇನೆ ಎಂದು ಆರೋಪಿ ತಿಳಿಸಿದರು. ಕಾಗದಪತ್ರಗಳನ್ನು ಪಡೆದೇ ತಿಳುವಳಿಕಾ ಪತ್ರವನ್ನು ನೀಡಬೇಕು ಎಂಬ ತಿಳುವಳಿಕೆ ಇತ್ತು ಎಂದರೆ ಸರಿ, ಆರೋಪಿಯನ್ನು ನಂಬಿದ್ದೆ. ಆರೋಪಿಯನ್ನು ಹಾಗೆ ನಂಬಲು ಆರೋಪಿ ನನಗೆ ಮೊದಲು ಪರಿಚಿತರೂ ಅಲ್ಲ, ಸಂಬಂಧಿಕರೂ ಅಲ್ಲ ಎಂದರೆ ಸರಿ, ಆರೋಪಿ ನನ್ನ ನಂಬಿದ್ದರು. ದಿ.27.03.2025 ರಂದು ರೂ.3 ಲಕ್ಷಗಳನ್ನು ಆರೋಪಿಗೆ ಬ್ಯಾಂಕ್ ಖಾತೆ

This is a True Copy of the Court Records Online. Authenticated @ districts.ecourtsindia.com/cnr/KABC030219462023/truecopy/order-2.pdf

ಮೂಲಕ ನೀಡಿರುತ್ತೇನೆ. ಹೀಗೆ ರೂ.3 ಲಕ್ಷಗಳನ್ನು ನೀಡಿದ ನಂತರವೂ ಸಹ ಆರೋಪಿ ನನಗೆ ಕಾಗದ ಪತ್ರಗಳನ್ನು ನೀಡದಿದ್ದರ ಬಬ್ರು ಹಲವಾರು ಬಾರಿ ಆರೋಪಿಗೆ ಕೇಳಿದ್ದೇನೆ, ಆದರೆ ದೂರನ್ನು ನೀಡಿಲ್ಲ.

3. ಆರೋಪಿಗೆ ಒಟ್ಟು ನಾನು ರೂ.20 ಲಕ್ಷಗಳನ್ನು ನೀಡಿದ್ದೇನೆ, ಆದರೆ ಆರೋಪಿ ಈವರೆಗೂ ಸಹ 1 ರೂಪಾಯಿಯೂ ಸಹ ನನಗೆ ನೀಡಿಲ್ಲ. ದಿ.25.12.2022 ರಂದು ಆರೋಪಿ ನಿಪಿ.1, 2 ನು ಪುನೀತ್ ಎನ್‌ಕ್ಲೇವ್ ನಲ್ಲಿ ನನಗೆ ನೀಡಿದ್ದಾರೆ. ದಿ.28.10.2023 ರಂದು ನಾನು ಆರೋಪಿಯ ವಿರುದ್ಧ ಜೆ.ಪಿ. ನಗರ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದೆ ಎಂದರೆ ಸರಿ. ಸದರಿ ದೂರಿನಲ್ಲಿ ನಾನು ಚೆಕ್ ಬಗ್ಗೆ ವಿವರ ನೀಡಿಲ್ಲ ಎಂದರೆ ಸರಿ. ಆರೋಪಿಯ ವಿರುದ್ಧ ನಾನು ನೀಡಿದ ದೂರಿನ ಮೇರೆಗೆ ಅಂತಿಮ ವರದಿಯನ್ನು ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ಹಾಕಿ ಕೇಸ್ ಈಗಲೂ ಸಹ ನಡೆಯುತ್ತಿದೆ ಎಂದರೆ ಸರಿ. ಸದರಿ ಪ್ರಕರಣವನ್ನು ರಾಜಿ ಮಾಡಿಕೊಳ್ಳದಿದ್ದರೆ ಹೆಚ್ಚಿನ ಕೇಸ್‌ಗಳನ್ನು ಹಾಕುತ್ತೇನೆ ಎಂದು ನಾನು ಹೆದರಿಸಿದ್ದೆ ಎಂದರೆ ಸುಳ್ಳು. ಅಸಲು ದಾವಾ ನಂ.7966-2023 ನ್ನು ಆರೋಪಿಯ ವಿರುದ್ಧ ಇದೇ ಎರಡು ಚೆಕ್ಕುಗಳಿಗೆ ಸಂಬಂಧಿಸಿ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಒ ಹೇ ಕೇ ಸ ಇ ಒ**

**15ನೇ ಎಸಿಜೆಎಂ ನ್ಯಾಯಾಧೀಶರು**

**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC030219462023/truecopy/order-2.pdf